ಕೂಡ ಆ ಭಾಗದ ವಿದ್ಯಾರ್ಥಿಗಳಿಗೆ ಅನುಕೂಲವಾಗಬೇಕೆಂದು ಅವರು ಅಭಿಪ್ರಾಯ ಪಟ್ಟಿದ್ದರು. ನಮ್ಮ ವೈದ್ಯಕೀಯ ಶಿಕ್ಷಣ ಸಚಿವರೂ ಕೂಡ ಅದಕ್ಕೆ ಸಕಾರಾತ್ಮಕವಾಗಿ ಉತ್ತರ ಕೊಟ್ಟಿದ್ದರು. ಆದರೆ ಅಲ್ಲಿ ಒಂದು ಸಭೆಯನ್ನು ಕರೆಯಬೇಕೆಂದು ಒಂದು ಮಾತನ್ನು ಹೇಳಿದ್ದೆವು, ಅಲ್ಲಿ ಸುಪ್ರೀಂ ಕೋರ್ಟಿನ ನಿರ್ಣಯ ಇದಕ್ಕೆ ಅಡ್ಡಿ ಬರಬಹುದು ಎಂದು ಸುಪ್ರೀಂ ಕೋರ್ಟಿನ ನಿರ್ಣಯ ಅಡ್ಡಿ ಬಂದರೆ ಅದಕ್ಕೆ ಸಂಬಂಧಪಟ್ಟಿಲ್ಲ, ಅದರ ಬಗ್ಗೆ ಪ್ರಸ್ತಾಪ ಮಾಡಬಹುದು, ಅಥವಾ ನ್ಯಾಯಾಲಯಕ್ಕೆ ಅವರು ಮೊರೆ ಇಡಬೇಕಾದ ಸಂದರ್ಭ ಬರಬಹುದು. ಆದರೆ ಈಗ ನಾವು ಮಾಡತಕ್ಕಂಥದ್ದನ್ನು ನಾವು ಮಾಡಲೇಬೇಕಾಗಿದೆ. ಎನ್ನುವಂತಹ ಮಾತು ಏನು ಇದೆ ಅದರ ಬಗ್ಗೆ ನಮ್ಮ ಸರ್ಕಾರದಲ್ಲಿ ಸಹಮತ ಇದೆ. ನಾನು ಈಗಾಗಲೇ ಈ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು ವೈದ್ಯಕೀಯ ಶಿಕ್ಷಣ ಸಚಿವರ ಗಮನಕ್ಕೆ ತಂದು ಆ ಭಾಗದ ಶಾಸಕರ ಸಭೆಯನ್ನು ಕರೆದು ಕೂಡಲೇ ನಿರ್ಧಾರ ತೆಗೆದುಕೊಳ್ಳತಕ್ಕಂಥದ್ದು ಮಾಡುತ್ತೇನೆ.

ಶ್ರೀ ವೈಜನಾಥ್ ಪಾಟೀಲ್ : ಮೂರು ವರ್ಷಗಳಿಂದ ಹೀಗೆಯೇ ಹೇಳುತ್ತಿದ್ದಾರೆ. ಸುಪ್ರೀಂ ಕೋರ್ಟ್ ಅಡ್ಡಿ ಬರುತ್ತದೆ ಎಂದು ಯಾವ ಕೋರ್ಟ್ ಅಡ್ಡಿ ಬರುವುದಿಲ್ಲ, ಸರ್ಕಾರದವರೇ ಅಡ್ಡಿ ಬರುತ್ತಿದ್ದಾರೆ. ವೆಸ್ಟೆಡ್ ಇಂಟರೆಸ್ಟ್ ಮಂತ್ರಿಗಳು ಮುಖ್ಯಮಂತ್ರಿಗಳಿಗೆ ಬಹಳ ಜನ ಇದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಸದಸ್ಯರು ಯಾವ ವಿಚಾರ ತಮಗೆ ಏನು ಕೇಳಬೇಕು ಎಂದು ಅನ್ನಿಸುತ್ತದೆ ಅಷ್ಟೇ ಕೇಳುತ್ತಾರೆ. ಸುಪ್ರೀಂ ಕೋರ್ಟ್ ಅಡ್ಡಿ ಬರುತ್ತದೆ ಎಂದು ನಿಲುವನ್ನು ತೆಗೆದುಕೊಂಡ ಸಂದರ್ಭದಲ್ಲಿ ಕೂಡ ಅದಕ್ಕೆ ಸಂಬಂಧಪಟ್ಟವರು ನ್ಯಾಯಾಲಯಕ್ಕೆ ಹೋಗಿ, ಆದರೆ ನಾವು ತೆಗೆದುಕೊಳ್ಳಬೇಕಾದ ನಿರ್ಣಯ ತೆಗೆದುಕೊಳ್ಳುತ್ತೇವೆಂದು ಹೇಳಿದೆ. ಈ ಶೈಕ್ಷಣಿಕ ವರ್ಷ ಪ್ರಾರಂಭ ಆಗುವುದರ ಒಳಗೆ ಕ್ರಮ ತೆಗೆದುಕೊಳ್ಳುವ ರೀತಿಯಲ್ಲಿ ಮಾನ್ಯ ಸಚಿವರ ಗಮನಕ್ಕೆ ತಂದು ಮುಂದಿನ ಕ್ರಮ ಕೈಗೊಳ್ಳುತ್ತೇನೆ.

ಹಾರಂಗಿ ಜಲಾಶಯದ ಗುತ್ತಿಗೆದಾರರಿಗೆ ನೀಡಬೇಕಾದ ಬಾಕಿ

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ (ಸೋಮವಾರಪೇಟೆ) : ಸನ್ಮಾನ್ಯ ಉಪ ಸಭಾಧ್ಯಕ್ಷರೆ, ತಮ್ಮ ಮುಖಾಂತರ ಸನ್ಮಾನ್ಯ ಭಾರೀ ನೀರಾವರಿ ಸಚಿವರ ಗಮನ ಸೆಳೆಯುವುದಕ್ಕೆ ಇಷ್ಟಪಡುತ್ತೇನೆ. ಹಾರಂಗಿ ಜಲಾಶಯದಲ್ಲಿ ಕಳೆದ ಮೂರು ದಿವಸಗಳಿಂದ ಗುತ್ತಿಗೆದಾರರೆಲ್ಲಾ ಅಮರಣಾಂತ ಉಪವಾಸ ಮುಷ್ಕರವನ್ನು ಹೂಡಿದ್ದಾರೆ. ಅವರಿಗೆ ಎಷ್ಟು ಹಣ ಪಾವತಿ ಮಾಡುವುದು ಬಾಕಿ ಇದೆ, ಎಷ್ಟು ದಿವಸದಲ್ಲಿ ಪಾವತಿ ಮಾಡುತ್ತೀರೆಂದು ಸನ್ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ (ಭಾರೀ ನೀರಾವರಿ ಖಾತೆ ಸಚಿವರು) : ಹಾರಂಗಿಯಲ್ಲಿ ಅವರ ಬಾಕಿ ಎಷ್ಟು ಇದೆ, ಎಷ್ಟು ದಿವಸದಲ್ಲಿ ಕ್ಲಿಯರ್ ಮಾಡುತ್ತೀರೆಂದು ಪ್ರಶ್ನೆ ಕೇಳಿದ್ದಾರೆ, The pending bill as on 31.3.98 is Rs. 8 crore 23 lakhs. The amount allocated to Harangi this year is Rs. 23 crores. 310 ಕೋಟಿ ರಿವೈಸ್ಡ್ ಎಸ್ಟಿಮೇಟ್. 248 ಕೋಟಿ ನಾವು ಈಗಾಗಲೇ ಖರ್ಚು ಮಾಡಿದ್ದೇವೆ. 23 ಕೋಟಿ ರೂಪಾಯಿ ಇರುವುದರಿಂದ ಬ್ಯಾಲೆನ್ಸ್ ಕ್ಲಿಯರ್ ಮಾಡುವುದಕ್ಕೆ ಏನೂ

ತಾಪತ್ರಯ ಇಲ್ಲ. 13.5.98 ರಂದು ಆರು ಜನ ಸ್ಟೈಕ್ ಮಾಡುತ್ತಿದ್ದರು. 14.5.98 ರಂದು ಸ್ಟೈಕ್ ಮಾಡುವವರು ಮತ್ತೆ ಜಾಸ್ತಿಯಾಗಿದ್ದಾರೆ. ದಯವಿಟ್ಟು ಅವರಿಗೆ ತಿಳಿಸಿ. I will see that some portion of the amount will be cleared.

ಶ್ರೀ ಬಸನಗೌಡ ಪಾಟೀಲ್ ಯತ್ನಾಳ್ : ನಾನು 33 ದಿವಸಗಳಿಂದ ಕಾಯುತ್ತಿದ್ದೇನೆ. ನೀವು ಅವಕಾಶ ಕೊಡದೆ ಹೋದರೆ ನಾನು ಧರಣಿ ಮಾಡುತ್ತೇನೆ.

ಉಪಾಧ್ಯಕ್ಷರು : ತಮಗೆ ಅವಕಾಶ ಕೊಡುತ್ತೇವೆಂದರೂ ಧರಣಿ ಮಾಡುತ್ತೇವೆಂದರೆ ಏನು ಮಾಡುವುದು? ಲೀಸ್ಟ್ ಪ್ರಕಾರ ನಾನು ಓದುತ್ತಿದ್ದೇನೆ, ತಾವು ಏಕೆ ಆತುರ ಪಡುತ್ತಿದ್ದೀರಿ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆರೋಗ್ಯ ಇಲಾಖೆಯ "ಡಿ" ಗ್ರೂಪಿನ ಹುದ್ದೆಗಳ ಭರ್ತಿ

ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಉಪಾಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆರೋಗ್ಯ ಇಲಾಖೆಗೆ ಸೇರಿದ ವಿವಿಧ ಇಲಾಖೆಗಳಲ್ಲಿ "ಡಿ" ಗುಂಪಿನ ಹುದ್ದೆಗಳು ಬಹಳಷ್ಟು ವರ್ಷಗಳಿಂದ ಖಾಲಿ ಇವೆ. ವೆನ್‌ಲಾಕ್ ಆಸ್ಪತ್ರೆಯಲ್ಲಿ 78, ಲೇಡಿ ಗೌಸಿಯಾ ಆಸ್ಪತ್ರೆಯಲ್ಲಿ ಸುಮಾರು 21, ಟಿಬಿ ಆಸ್ಪತ್ರೆಯಲ್ಲಿ 10, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 113 'ಡಿ' ವರ್ಗದ ಹುದ್ದೆಗಳು ಖಾಲಿ ಇವೆ. ಒಟ್ಟು 847 ಮಂಜೂರಾದ ಹುದ್ದೆಗಳಲ್ಲಿ 625 ಸೇರಿಕೊಂಡು, ಸುಮಾರು 222ಹುದ್ದೆಗಳು ಖಾಲಿ ಇವೆ. ಇದರಿಂದ ಬಹಳಷ್ಟು ತೊಂದರೆಗಳಾಗುತ್ತಿವೆ. ಜೊತೆಗೆ ಉಳ್ಳಾಲ ಆರೋಗ್ಯ ಕೇಂದ್ರದಲ್ಲಿ ಮರಣೋತ್ತರದ ಪರೀಕ್ಷೆ ಮಾಡುವ ಒಂದು ಕೊಠಡಿ ಇದೆ ಬಹಳಷ್ಟು ವರ್ಷಗಳಿಂದ ದುರಸ್ತಿಯಾಗಿಲ್ಲ. ಅಲ್ಲಿ ಸಮುದ್ರ ಹತ್ತಿರವಿರುವುದರಿಂದ ಎಲ್ಲಾ ಬಂದು ಅಲ್ಲಿಯೇ ಸಾಯುತ್ತಿದ್ದಾರೆ. ಈ ಶವವನ್ನು ತೆಗೆದುಕೊಂಡು ಹೋಗಿ ಅಲ್ಲಿಟ್ಟರೆ ಏಳು ಗಂಟೆ ನಂತರ ಪೋಸ್ಟ್ ಮಾರ್ಟಮ್ ಮಾಡುವುದಿಲ್ಲ. ರಾತ್ರಿ ನಾಯಿ ಬೆಕ್ಕುಗಳು ಬಂದು ಅದನ್ನೆಲ್ಲಾ ತಿನ್ನುತ್ತಿವೆ. ಆದ್ದರಿಂದ ದಯವಿಟ್ಟು ಇದಕ್ಕೆ ಅನುದಾನ ಬಿಡುಗಡೆ ಮಾಡಬೇಕು, ಹಾಗೂ ನಾಲ್ಕು ಗಂಟೆಯ ನಂತರ ಬಂದವನ್ನೂ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ವಿನಂತಿ ಮಾಡುತ್ತಿದ್ದೇನೆ.

ಡಾ|| ಹೆಚ್.ಸಿ. ಮಹದೇವಪ್ಪ (ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಸಚಿವರು) : ಆ ಜಿಲ್ಲೆಯಲ್ಲಿರತಕ್ಕಂತಹ ಖಾಲಿ ಹುದ್ದೆಗಳನ್ನು ತುಂಬುವುದಕ್ಕೆ ಹಾಗೂ ರಾಜ್ಯಾದ್ಯಂತ ಖಾಲಿ ಇರತಕ್ಕಂತಹ ಹುದ್ದೆಗಳನ್ನು ತುಂಬುವುದಕ್ಕೆ ನಾವು ಈಗಾಗಲೇ ಕಾರ್ಯ ಪ್ರಾರಂಭ ಮಾಡಿದ್ದೇವೆ. ಮತ್ತು ಸುಮಾರು 200 ಗ್ರೂಪ್ 'ಡಿ' ಹುದ್ದೆಗಳು ಖಾಲಿ ಇವೆ ಎಂದು ಹೇಳಿದ್ದಾರೆ, ಬೇರೆ ಬೇರೆ ಇಲಾಖೆಗಳಿಂದ ಜಿಲ್ಲಾಧಿಕಾರಿಗಳು ಆರೋಗ್ಯ ಇಲಾಖೆಗೆ ನೇಮಕಾತಿಗಳನ್ನು ಕೊಡುತ್ತಿದ್ದಾರೆ, ಮತ್ತು ಸಮಗ್ರವಾದ ವಿವರವನ್ನು ಪಡೆದು ಆ ಹುದ್ದೆಗಳನ್ನು ತುಂಬುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ. ಮತ್ತು ಉಳ್ಳಾಲ ಕ್ಷೇತ್ರದಲ್ಲಿ ಪೋಸ್ಟ್ ಮಾರ್ಟಮ್ ಸೆಂಟರ್ ಸರಿಯಾಗಿಲ್ಲ ಅದನ್ನು ದುರಸ್ತಿ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುವುದರ ಜೊತೆಗೆ ನಾಲ್ಕು ಗಂಟೆಯಾದರೂ ಪೋಸ್ಟ್ ಮಾರ್ಟಮ್ ಮಾಡಬೇಕೆಂದು ಹೇಳಿದ್ದಾರೆ. ಸೂರ್ಯ ಅಸ್ತಂಗತವಾದ ಮೇಲೆ ಸರಿಯಾಗಿ ಬೆಳಕಿನ ಕಿರಣ ಬೀಳದೇ ಇರುವುದರಿಂದ